# ಶಕುನಿ ದಾಳ ಹಿಡಿದ, ದಾಳ ಬಿಟ್ಟ, 'ಗೆದ್ದೇ' ಅಂದ

**ಶಕುನಿ:** ಹಾಸಂಗಿ ಹರಡಿದೆ. ಇವರೆಲ್ಲಾ ನಿನ್ನನ್ನೇ ಕಾಯುತ್ತಿದಾರೆ

ರಾಜಾ, ನಾವು ದಾಳ ಬಿತ್ತಿದರೆ ಆಟ ಶುರು

**ಯುಧಿಷ್ಠಿರ:** ಜೂಜು ಅಂದರೆ ಕಪಟ. ಅದರಿಂದ ಸಿಗುವುದು ಪಾಪವೇ

ಕ್ಷತ್ರಿಯರಿಗೆ ಪರಾಕ್ರಮ ತೋರಿಸಲು ಏನಿದೆ ಅದರಲ್ಲಿ?

ಇದೇ ಸರಿ ಎನ್ನುವ ಒಂದೇ ಒಂದು ನಿಯಮವೂ ಇಲ್ಲ ಅದಕ್ಕೆ ಈ ಜೂಜನ್ನು ಏಕೆ ಇಷ್ಟೊಂದು ಕೊಂಡಾಡತೀಯೋ ಕಾಣೆ

**ಶಕುನಿ:** ಅಂಕಿ ಮರ್ಮ ತಿಳಿದವನು ಮೋಸ ಪತ್ತೆ ಮಾಡತಾನೆ

ದಾಳ ಎಸೆಯುವಾಗ ಎಚ್ಚರ ತಪ್ಪದೆ ನಿಗಾ ಇಟ್ಟವನು

ಆಟದ ಮೇಲೆ ಮನಸಿಟ್ಟು ತಾಳಿಕೊಳ್ಳಬಲ್ಲವನು ನಿಜವಾದ ಬುದ್ಧಿವಂತ

ದಾಳ ಎಸೆಯುವುದರಲ್ಲಿದೆ ಎದುರಾಳಿಯ ಸೋಲು

ದೈವ ಅಂತೀಯಲ್ಲ ಅದೇ ಇದನ್ನೆಲ್ಲ ನಡೆಸುವುದು

ತಡಬೇಡ, ಆಡೋಣವಾ ರಾಜ! ಪಣ ಒಡ್ಡು. ಕಾಯುವುದು ಬೇಡ

**ಯುಧಿಷ್ಠಿರ:** ಲೋಕಬಲ್ಲ ದೇವಲ ಋಷಿಗೆ

ಮೋಸ ಸುಳಿಯದು, ಮಾಟ ಮಂತ್ರ ತಿಳಿಯದು

ಒಗಟು ಮಾತಾಡುವವರಲ್ಲ, ಅವರೇ ಹೇಳುತ್ತಾರೆ

'ಧರ್ಮದಿಂದ ಯುದ್ಧ ಮಾಡಿ ಗೆಲ್ಲಿ, ಅದು ಉತ್ತಮ'

ಮುಚ್ಚುಮರೆಯಿಲ್ಲದ ಆಟ ಸತ್ಪುರುಷರ ಆಟ, ಅದನ್ನು ಮೀರಿ

ಗೆಲ್ಲುವುದಕ್ಕೆ ಹೋಗಬೇಡ ಶಕುನಿ. ಮೋಸದಿಂದ ಬರುವ ಹಣವೂ ಬೇಡ

ಆ ಸುಖವೂ ಬೇಡ ನನಗೆ

ಆದರೆ... ಜೂಜಲ್ಲಿ ಮೋಸ ಇಲ್ಲದಿದ್ದರೆ ಅದಕ್ಕೆ ಬೆಲೆಯೇ ಇಲ್ಲ ಅಂತಾಗಿದೆಯಲ್ಲಾ

**ಶಕುನಿ:** ಶ್ರೋತ್ರೀಯ ಬ್ರಾಹ್ಮಣ ಇನ್ನೊಬ್ಬ ಬ್ರಾಹ್ಮಣನನ್ನು ಸೋಲಿಸುವುದು ಮೋಸದಲ್ಲ

ದುರ್ಬಲ ಬಲಿಷ್ಠನ ಮೋಸದಿಂದಲೇ ಸೋಲುತ್ತಾನೆ

ಪೆದ್ದ ಸೋಲುವುದು ಬುದ್ಧಿವಂತನ ಮೋಸದಿಂದನೆ

ತಿಳಿದವನು ತಿಳಿಯದವನನ್ನು ಸೋಲಿಸಿದರೆ ಅದನ್ನು ಮೋಸ ಎನ್ನುವುದಿಲ್ಲ

ನನ್ನದು ಮೋಸ ಎಂದು ನೀನು ಹೆದರಿರುವುದಾದರೆ

ಆಟ ಬೇಡ ಅನ್ನು, ಹಿಂತಿರುಗಿ ಹೋಗು

**ಯುಧಿಷ್ಠಿರ:** ಪಂತಕ್ಕೆ ಬಂದ ಮೇಲೆ ಒಲ್ಲೆ ಎನ್ನುವುದಿಲ್ಲ ಇದು ನನ್ನ ವ್ರತ

ವಿಧಿ ದೊಡ್ಡದು ಅದರ ಕೈಲಿದೀನಿ

ನನ್ನ ಜತೆ ಆಡುವವರು ಯಾರು? ಪಣ ಏನು? ಹೇಳು

ಆಮೇಲೆ ಆಟ ಶುರು ಮಾಡಣ

**ದುರ್ಯೋಧನ:** ಪಣಕ್ಕೇ ಧನರತ್ನ ನನ್ನದು. ನನ್ನ ಪರವಾಗಿ ನನ್ನ ಮಾವ ಶಕುನಿ ಆಡತಾನೆ

**ಯುಧಿಷ್ಠಿರ:** ಒಬ್ಬರಿಗಾಗಿ ಇನ್ನೊಬ್ಬರು ಆಡುವುದು ಸರಿ ಕಾಣಲ್ಲ. ಆದರೆ ನಿಮ್ಮಿಷ್ಟ

ಇದು ತಿಳಿದೂ ಆಡತೀನಿ ಆಟ ಶುರುವಾಗಲಿ

ಆಟ ಶುರುವಾದ ಕೂಡಲೇ ಧೃತರಾಷ್ಟ್ರನನ್ನು ಮುಂದಿಟ್ಟುಕೊಂಡು ರಾಜರೆಲ್ಲಾ ಆ ಸಭೆಗೆ ಬಂದರು. ಭೀಷ್ಮ, ದ್ರೋಣ, ಕೃಪ, ಮಹಾಮತಿಯಾದ ವಿದುರ ಎಲ್ಲರೂ. ನಡೆಯುತ್ತಿರುವುದು ಇವರಾರ ಮನಸ್ಸಿಗೂ ಇಷ್ಟ ಇಲ್ಲ. ಒಂದೊಂದು ಆಸನದಲ್ಲಿ ಒಬ್ಬೊಬ್ಬರು ಕೂತರು ಕೆಲವರು. ಕೆಲವರು ಇಬ್ಬಿಬ್ಬರು ಕೂತರು. ಸಿಂಹದ ಕತ್ತಿನ ಆ ರಾಜರು ಹೀಗೆ ಸಿಂಹಾಸನದಲ್ಲಿ ಕೂತರು. ಆ ರಾಜರೆಲ್ಲರೂ ವೇದಶಾಸ್ತ್ರಗಳನ್ನ ತಿಳಿದವರು ಒಬ್ಬೊಬ್ಬರೂ ಸೂರ್ಯನ ಹಾಗೆ ಹೊಳೆಯುತ್ತಿದ್ದರು. ಆ ರಾಜರ ಕಾಂತಿಗೆ ಇಡೀ ಸಭೆ ಸ್ವರ್ಗದ ಹಾಗೆ ಹೊಳೆಯುತ್ತಿತ್ತು. ಎಲ್ಲರೂ ಬಂದ ಮೇಲೆ ಸ್ನೇಹದ ಜೂಜು ಶುರುವಾಯಿತು.

**ಯುಧಿಷ್ಠಿರ:** ಸಾಗರದ ಸುಳಿಯಲ್ಲಿ ಹುಟ್ಟಿದ ಮುತ್ತುಗಳು ಇವು. ಅಚ್ಚ ಬಂಗಾರದ

ಕುಂದಣ ಇವಕ್ಕೆ. ಈ ಮಣಿಹಾರ ನನ್ನ ಪಣ. ನಿನ್ನ ಪಣ ಏನು?

**ದುರ್ಯೋಧನ:** ನನ್ನ ಹತ್ತಿರ ಮುತ್ತು ಮಣಿ ಇಲ್ಲವಾ, ಬೇಕಾದಷ್ಟಿದೆ. ಸೋತರೆ ನನಗೇನೂ

ಹೊಟ್ಟೆ ಉರಿಯಲ್ಲ ಅಲ್ಲದೆ ಈ ಆಟ ಗೆದ್ದೇ ಗೆಲ್ತೇನೆ

**ವೈಶಂಪಾಯನ:** ದಾಳದ ಮರ್ಮ ಅರಿತವನು ಶಕುನಿ. ದಾಳ ಹಿಡಿದ. ದಾಳ ಬಿಟ್ಟ. ಗೆದ್ದೆ ಅಂದ

**ಯುಧಿಷ್ಠಿರ:** ಏನೋ ಮೋಸ ಮಾಡಿದೀಯ ಶಕುನಿ. ಇರಲಿ ಎಷ್ಟು ಸಾರಿ ಬೇಕಾದರೂ ದಾಳ ಉರಳಿಸೋಣ. ನನಗೇನು!

ನನ್ನ ಭಂಡಾರದಲ್ಲಿ ಬಂಗಾರದ ಗಣಿಯೇ ಇದೆ

ಇಟ್ಟೆ ತಗೋ! ನೂರು ಕೊಪ್ಪರಿಗೆ

ಒಂದೊಂದರಲ್ಲೂ ಸಾವಿರ ಬಂಗಾರದ ನಾಣ್ಯ ಇದು ನನ್ನ ಪಣ

**ವೈಶಂಪಾಯನ:** ಬೀಳೇ ಇಲ್ಲದ ಯುಧಿಷ್ಠಿರ ಪಣ ಇಟ್ಟು ಹೀಗೆಂದ ಅಷ್ಟರಲ್ಲೇ

ಶಕುನಿ ದಾಳ ಹಾಕಿ 'ಗೆದ್ದೇ' ಎಂದ

**ಯುಧಿಷ್ಠಿರ:** ಇದು ನನ್ನ ರಥ, ಈಗಿಟ್ಟದ್ದಕ್ಕೆ ಸಾವಿರಪಟ್ಟು ಬೆಲೆ ಇದಕ್ಕೆ. ಬೆಲೆ ಕಟ್ಟಲಾಗದ

ಚಕ್ರಗಳು. ಕಿಣಿಕಿಣಿ ಅನ್ನುವ ಗಂಟೆಯ ಜಾಲ. ಒಳಗೆಲ್ಲಾ ಹುಲಿ ಚರ್ಮವೆ.

ನಾವೆಲ್ಲಾ ಇಲ್ಲಿಗೆ ಬಂದದ್ದು ಅದರಲ್ಲೇ. ಇದರಲ್ಲಿ ಕೂತವನಿಗೆ ಸೋಲಿಲ್ಲ

ಸಮುದ್ರದ ಹಾಗೆ ಮೇಘದ ಹಾಗೆ ಇದರ ಸದ್ದು

ಬೆಳಕು ಹೊಮ್ಮುವ ಕಂದು ಕುಕರ ಬಣ್ಣದ

ಎಂಟು ಕುದುರೆಗಳನ್ನ ಹೂಡಿದೆ ಅದಕ್ಕೆ

ಆ ಕುದುರೆಗಳೋ ಇಡೀ ದೇಶದಲ್ಲೇ ಎಲ್ಲರಿಗೂ ಅಚ್ಚುಮೆಚ್ಚು

ಅದರಿಂದ ತಪ್ಪಿಸಿಕೊಳ್ಳುವ ಜೀವಿಯೇ ಇಲ್ಲ ಈ ಭೂಮಿ ಮೇಲೆ

ಆ ಮಾತು ಹೇಳುತ್ತಿದ್ದ ಹಾಗೇ ಶಕುನಿ ಏನೋ ಕೈಚಳಕ ಮಾಡಿದ, ಗೆದ್ದೆ ಅಂದ

